ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 9-12
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ನಭಾಳ ವಿವಾಹ

**ಖೈರುನ್ನಿಸಾ ಬೇಗಂ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕಡಗಂಚಿ, ಕಲಬುರುಗಿ.

***Abstract:***
*ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಜನಪ್ರಿಯವಾದ, ಶ್ರೀಮಂತವಾದ ಹಾಗೂ ಸಮೃದ್ಧಿಯಾದ ಸಾಹಿತ್ಯ ಪ್ರಕಾರವೆಂದರೆ ಕಾದಂಬರಿ ಪ್ರಕಾರ ಎಂದು ಹೇಳಬಹುದು. ತಿರುಮಲಾಂಬ ಅವರು ಬರೆದಿರುವ ನಭಾ ಕಾದಂಬರಿಯು ಸಮಾಜದಲ್ಲಿ ಗಂಡನಿಲ್ಲದೆ ಹೆಣ್ಣುಮಗಳು ಅನುಭವಿಸುವ ನೋವು, ದುಃಖ–ದುಮ್ಮಾನಗಳು, ನಭಾಳ ತಾಯಿ ತೀರಿಕೊಂಡಾದ ಮೇಲೆ ಅವಳು ಸಂಬಂಧಿಕರ ಮನೆಯಲ್ಲಿ ಉಳಿದ ಪಡಬಾರದ ಸಂಕಟವನ್ನು ಅನುಭವಿಸುವ ವೃತ್ತಾಂತವನ್ನು ಕಾದಂಬರಿ ಬಿಚ್ಚಿಡುತ್ತದೆ.*

***Keywords:*** *ಕನ್ನಡ ಸಾಹಿತ್ಯ, ಕಾದಂಬರಿ ಸಾಹಿತ್ಯ, ತಿರುಮಲಾಂಬ, ನಭಾಳ ವಿವಾಹ*

## ಪೀಠಿಕೆ

ತಿರುಮಲಾಂಬ ಅವರು 1887 ಮಾರ್ಚ್ 15ರಂದು ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ಜನಿಸಿದರು. ಹತ್ತನೇ ವಯಸ್ಸಿಗೆ ವಿಧವೆಯಾದ ಇವರು ತಮ್ಮ ಬಿಡುವಿನ ವೇಳೆಯಲ್ಲಿ ಆಚೀಚಿನ ಮಕ್ಕಳಿಗೆ ಪಾಠ ಹೇಳಲು ಪ್ರಾರಂಭಿಸಿ, ತಮಗೆ ಇಷ್ಟವಾದುದ್ದನ್ನು ಬರೆದಿಟ್ಟುಕೊಳ್ಳುವ ಹವ್ಯಾಸ ಅವರಿಗಿತ್ತು. ಇವರು ಅನೇಕ ಕತೆಗಳು, ಕಾದಂಬರಿ, ನಾಟಕ, ಪ್ರಬಂಧ ಹೀಗೆ ವೈವಿಧ್ಯಮಯ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಂದಿನ ಮಡಿವಂತಿಕೆ ಸಮಾಜದ ಟೀಕೆಗಳನ್ನು ಧಿಕ್ಕರಿಸಿ, ಧೃತಿಗೆಡದೆ ಬರವಣಿಗೆ ಮಾಡಿದರು. ಹೊಸಗನ್ನಡದ ಪ್ರಥಮ ಕಾದಂಬರಿಗಾರ್ತಿ ಎಂದು ಗುರುತಿಸಿಕೊಂಡಿದ್ದಾರೆ.

ನಭಾ ಕಾದಂಬರಿಯಲ್ಲಿ ಹೆಣ್ಣಿನ ಅಂತರಾಳದ ಸೂಕ್ಷ್ಮತೆಗಳನ್ನು ಹೇಳುತ್ತಾ, ಅವಳು ಅನುಭವಿಸುವ ನೋವು, ಗಂಡನಿಗೆ ಕೊಟ್ಟ ಒಂದು ಮಾತಿನ ನೆನಪು ಅವಳ ಇಡೀ ಬದುಕನ್ನು ನುಂಗಿ ಹಾಕುವ ವೃತ್ತಾಂತವನ್ನು ನಿರೂಪಿಸುತ್ತದೆ. ನಿರೂಪಕರು ಅವಳನ್ನು ಸ್ವತಂತ್ರಳಾಗಿ ಮಾಡಿ ಸಂಸಾರದ ಬಂಧನದಿಂದ ಮುಕ್ತಗೊಳಿಸಬೇಕಾಗಿತ್ತು ಆದರೆ ಗಂಡನ ಒಂದು ಮಾತಿನ ನೆನಪಿನಲ್ಲಿ ನರಳಾಡುವಂತೆ ಮಾಡಬಾರದಾಗಿತ್ತು. ಹೆಣ್ಣಿನ ಸೂಕ್ಷ್ಮ ಮನಸ್ಸಿನ ತಲ್ಲಣಗಳನ್ನು ನಿರೂಪಿಸುತ್ತದೆ. ಕಾದಂಬರಿಯಲ್ಲಿ ಸಾಮಾಜಿಕ ಜೀವನದಲ್ಲಿ ನಡೆಯುವ ಘಟನೆಗಳಿವೆ ಮತ್ತು ನಭಾಳ ಜೀವನದಲ್ಲಿ ನಡೆದ ಘಟನೆಗಳನ್ನು ನಿರೂಪಿಸುತ್ತದೆ. ನಭಾ ಕಾದಂಬರಿಯ ಕೇಂದ್ರ ಪಾತ್ರವಾಗಿದ್ದಾಳೆ. ಅವಳು ತನ್ನ ಸಚ್ಚಾರಿತ್ರ್ಯವನ್ನು ಉಳಿಸಿಕೊಂಡು ಸದ್ಗುಣಿಯಾಗಿದ್ದಾಳೆ. ತಾಯಿ–ಮಗಳ ಸಹಜ ಸಂಭಾಷಣೆಯಲ್ಲಿ ನಭಾಳ ಗಂಡ ಶ್ರೀನಿವಾಸನನ್ನು ನೆನಪಿಸಿಕೊಳ್ಳುವರು. ಹಿಂದೆ ನಡೆದ ಘಟನೆಯನ್ನು ಮರೆಯಲು ನಭಾಳ ತಾಯಿ ಪ್ರಯತ್ನಿಸುವಳು ಆದರೆ ಆಗುವುದಿಲ್ಲ. ಶ್ರೀನಿವಾಸನು ಇವರಿಂದ ದೂರವಿದ್ದು ಐವತ್ತು ರೂಪಾಯಿ

***Please cite this article as:*** *ಖೈರುನ್ನಿಸಾ ಬೇಗಂ.* (2025). *ನಭಾಳ ವಿವಾಹ. ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(4), 9–12

ಸಂಬಳದ ನೌಕರಿ ಮಾಡುತ್ತಿರುತ್ತಾನೆ. ಹೇಗಾದರೂ ಸರಿ ನಭಾಳ ಸಂಸಾರವನ್ನು ಸರಿಪಡಿಸಬೇಕು ಎಂದು ಅವಳ ತಾಯಿ ಆಶಿಸುತ್ತಾಳೆ.

ಮೈದುನ ಕಳಿಸಿದ ಪತ್ರದಲ್ಲಿರುವ ವಿಷಯವನ್ನು ಓದಿದ ನಭಾಗೆ ದೇಹದಲ್ಲಿ ಕಸುವಿಲ್ಲದಂತಾಯಿತು. ಗಂಡ ತೀರಿಹೋದ ವಿಷಯ ತಿಳಿದು ನಭಾಗೆ ಏನು ತೋಚದಂತಾಯಿತು. ಅವನ ಅಪೇಕ್ಷೆಯಂತೆ ನಭಾ ನಡೆದುಕೊಳ್ಳುವಳು. ಶ್ರೀನಿವಾಸ ತಾನು ಸತ್ತರೂ ಹೆಂಡತಿ ತನ್ನ ನೆನಪಿನಲ್ಲಿ ಜೀವನ ಕಳೆಯಬೇಕೆಂದು ಆಶಿಸುತ್ತಾನೆ. ಇಲ್ಲಿ ಒಂದು ಪಾತ್ರದ ಅಪೇಕ್ಷೆಗೆ ಮಹತ್ವ ಕೊಟ್ಟು ಮತ್ತೊಂದು ಪಾತ್ರದ ಬದುಕು ಅತಂತ್ರವಾಗುತ್ತದೆ. ಇಂತಹ ಆಸೆಯಿಂದಾಗಿ ಸ್ತ್ರೀಯರ ಬದುಕಿನಲ್ಲಿ ಉಂಟಾಗುವ ದುಷ್ಪರಿಣಾಮವನ್ನು ನಭಾ ಪಾತ್ರದ ಮೂಲಕ ಲೇಖಕರು ನಿರೂಪಿಸಿದ್ದಾರೆ.

ನಭಾಳನ್ನು ಮದುವೆಯಾದಗಿನಿಂದಲೂ ಒಂದು ದಿನ ಮನೆಗೆ ಬಂದವನಲ್ಲ, ಅವಳನ್ನು ನೋಡಿದವನು ಅಲ್ಲ, ಗಂಡನ ಮನೆಗೆ ಕಾಲಿಡದ ನಭೆ ನಾಲ್ಕಾರು ತಿಂಗಳಲ್ಲಿಯೇ ವಿಧವೆಯಾದಳು. ಸಾಯುತ್ತಿರುವ ಗಂಡನ ಅಂತಿಮ ಸಂದೇಶ ನೆನಪಾಗಿಯೇ ಉಳಿಯುತ್ತದೆ. ನಭೆ ಪತಿವ್ರತ ಧರ್ಮವನ್ನು ಗಂಡನ ಇಚ್ಛೆಯಂತೆ ನಡೆದುಕೊಳ್ಳುತ್ತಾಳೆ. ಇವರಿಬ್ಬರೂ ಮಾನಸಿಕವಾಗಿ ಪತ್ರದ ಮೂಲಕ ಗಂಡ–ಹೆಂಡತಿಯಾಗಿದ್ದರು. ಶ್ರೀನಿವಾಸ ತನ್ನ ಅನಾರೋಗ್ಯದ ಬಗ್ಗೆ ಪತ್ರದಲ್ಲಿ ತಿಳಿಸುವಾಗ ನನ್ನ ಸಾವು ಖಚಿತ, ನೀನು ಧೈರ್ಯವಂತಳಾಗಿರು, ವೈಧವ್ಯದ ಕಾರಣದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳಬಾರದೆಂದು ಕಿವಿಮಾತನ್ನು ಹೇಳುತ್ತಾನೆ. ಅವನ ಮಾತುಗಳು ನಭೆಯ ನೆನಪಿನಲ್ಲಿ ಸದಾ ಜಾಗೃತವಾಗಿದ್ದವು. ತಾಯಿ ತೀರಿಹೋದ ಮೇಲೆ ಚಿಕ್ಕಮ್ಮ ಮೂದಲಿಸಿ ಮಾತಾನಾಡುತ್ತಾಳೆ. . ತಾಯಿ ಸತ್ತ ಮೇಲೆ ದಿಕ್ಕಿಲ್ಲದೆ ನಭಾ ಚಿಕ್ಕಪ್ಪನ ಮನೆ ಸೇರಿದಳು ಅಲ್ಲಿ ಚಿಕ್ಕಪ್ಪ–ಚಿಕ್ಕಮ್ಮ ಅವರ ದಾಂಪತ್ಯದ ಮಾತುಗಳು ನೆನಪಿಗೆ ಬಂದು ಹೃದಯ ಒಡೆದು ಹೋಗುವಂತಾಗುತ್ತಿತ್ತು ಆದರೂ ಅವಳು ಧೃತಿಗೆಡುತ್ತಿರಲಿಲ್ಲ.

'ಶರಾವತಿ ಮೃದುವಾಕ್ಯವನ್ನು ಬಲ್ಲವರು ನೀವೇನೋ? ಆ ಸುಟ್ಟು ಮೊರೆಯವಳು, ಈಗ ಉರಿದು ಬೂದಿಯಾಗುವ ಆ ಬಜಾರಿಯು ಕೊಟ್ಟಿರುವ ಯಾತನೆಗಳನ್ನು ಸ್ಮರಿಸಿಕೊಂಡರೆ, ಮೈ ಉರಿದು ಹೋಗುವುದು.'[1] ಶರಾವತಿಗೆ ನಭಾಳ ತಾಯಿಯ ಮೇಲೆ ವೈಷಮ್ಯವಿತ್ತು. ಸೇಡು ತೀರಿಸಿಕೊಳ್ಳುವ ಕಾಲ ಒದಗಿದಾಗ ಸುಮ್ಮನಿರದೆ ಹಿಂದೆ ಅವಳು ಕೊಟ್ಟ ಯಾತನೆಗಳನ್ನು ನೆನಪಿಸಿಕೊಂಡು ಶವದ ಮುಂದೆ ಬೈದುಕೊಳ್ಳುವ ಮನೋಧೋರಣೆಯು ವ್ಯಕ್ತವಾಗಿದೆ. ತಾಯಿಯ ಅಂತ್ಯಸಂಸ್ಕಾರವನ್ನು ಮಾಡುವ ಸಲುವಾಗಿ ನಭಾ ತನ್ನ ಸಂಪತ್ತನ್ನು ಶರಾವತಿಗೆ ಸಮರ್ಪಿಸಿದಳು. ಅವಳ ಬದುಕು ಅತಂತ್ರವಾಗಿರುವಾಗ ಸ್ವಾರ್ಥಜನರು ಅವಳನ್ನು ಮಾನಸಿಕವಾಗಿ ಹೇಗೆ ಹಿಂಸಿಸುತ್ತಾರೆಂಬುನ್ನು ಕಾದಂಬರಿ ನಿರೂಪಿಸುತ್ತದೆ. ನಭಾಳು ಅನುಭವಿಸಿದ ಯಾತನೆಗಳನ್ನು ಮಹಿಳೆಯರು ಒಂದಲ್ಲ ಒಂದು ಕಾರಣದಿಂದಾಗಿ ಅನುಭವಿಸುವರು ಎಂಬ ಅಂಶವನ್ನು ಕಂಡುಕೊಳ್ಳಬಹುದು. ಸ್ತ್ರೀಯರಿಗೆ ತಾಳ್ಮೆ, ಸ್ವಾತಂತ್ರ್ಯ, ಶಿಕ್ಷಣ, ವಿಚಾರಗಳನ್ನು ಅಭಿವ್ಯಕ್ತಪಡಿಸುವ ಅವಕಾಶವಿರಬೇಕು. ಮುಕ್ತವಾಗಿ ಜೀವನ ನಡೆಸಬೇಕೆಂಬ ಅಭಿಲಾಷೆಯಿಂದ ನಿರೂಪಕರು ನಭಾ ಪಾತ್ರದ ಮೂಲಕ ವಿವರಿಸಿದ್ದಾರೆ.

ಸಾಂಸಾರಿಕ ಜೀವನದಿಂದ ದೂರ ಉಳಿದಿರುವ ಹೆಣ್ಣಿನ ಮುಂದೆ ಪ್ರೇಮದ ಪಿಸುಮಾತುಗಳು ಯಾವ ರೀತಿಯ ಪ್ರಭಾವ ಬೀರುತ್ತವೆಂಬುದನ್ನು ಅರಿಯದೆ ಶಂಕರನಾಥ ಶರಾವತಿ ಏಕಾಂತದ ಸಂಭಾಷಣೆಯು ನೆನಪಿಗೆ ಬಂದು ನಭಾಳ ಹೃದಯವು ಒಡೆದು ಹೋಗುತ್ತಿತ್ತು. ಅವಳು ಮಾನಸಿಕವಾಗಿ ಸ್ಥೈರ್ಯದಿಂದಿದ್ದಳು ಆದರೆ ಶರಾವತಿಯ ವರ್ತನೆಯನ್ನು ನಭಾಳಿಗೆ ಸಹಿಸಿಕೊಳ್ಳಲು ಅಸಾಧ್ಯವಾಯಿತು. ತನ್ನ ಚಿಕ್ಕಪ್ಪನೊಡನೆ

[1] ತಿರುಮಲಾಂಬ. (1920). *ನಭಾ.* ಸತೀಹಿತೈಷಿಣೀ ಮಾತೃಮಂದಿರ. ಪುಟ. 17

ಹೊರಟುಹೋದಳು. ಚಿಕ್ಕಮ್ಮ ರಮಾ ನಭಾಳಿಗೆ ಆಪ್ತಳಾದಳು. ಅವಳೊಂದಿಗೆ ಸ್ನೇಹದಿಂದಿರುತ್ತಿದ್ದಳು. ಅವಳ ಯೋಗಕ್ಷೇಮದಲ್ಲಿ ಆಸಕ್ತಿ ವಹಿಸುತ್ತಿದ್ದಳು. ನಭಾಳ ಮಾನಸಿಕ ಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡ ಅವಳು ಸಂತ್ವಾನ ಹೇಳುವಳು. ನಭಾಳ ಆಲೋಚನೆಗಳನ್ನು ಮುಕ್ತವಾಗಿ ಸ್ವೀಕರಿಸುವ ಮನಃಸ್ಥಿತಿ ರಮಾಳಿಗಿತ್ತು. ಶಂಕರನಾಥನು ತಾಯಿ–ತಂದೆಯನ್ನು ಕಳೆದುಕೊಂಡು ಅನಾಥಳಾದ, ಗಂಡನಿಲ್ಲದೆ ವೈಧವ್ಯ ಪ್ರಾಪ್ತಿಮಾಡಿಕೊಂಡ ನಭಾಳಿಗೆ ಆಸೆರೆಯಾಗುವುದನ್ನು ಬಿಟ್ಟು ಹೆಂಡತಿಗೆ ಪ್ರಾಮುಖ್ಯತೆ ಕೊಡುವ ಮನೋಧೋರಣೆಯನ್ನು ಕಾಣುತ್ತೇವೆ. ನಭಾ ವಿದ್ಯಾಭ್ಯಾಸ ಮುಂದುವರೆಸುವ ವಿಚಾರವನ್ನು ಮುಂದಿಟ್ಟಾಗ ಅಣ್ಣಾ ನಿರಂಜನ ನಯವಾಗಿ ತಿರಸ್ಕರಿಸುತ್ತಾನೆ. ಸ್ತ್ರೀಯರಿಗೆ ಯಾಕೆ ಬೇಕು ಶಿಕ್ಷಣ ಮನೆಗೆಲಸ ಮಾಡಿಕೊಂಡು ಆರಾಮಗಿ ಇರಬಹುದೆಂಬ ಮನೋಧೋರಣೆಯನ್ನು ಲೇಖಕರು ನಿರಂಜನ ಪಾತ್ರದ ಮೂಲಕ ನಿರೂಪಿಸುವ ಕಥನಕ್ರಮವಿದೆ.

ನಭೆಯು ಒಂದಲ್ಲ ಒಂದು ರೀತಿಯಿಂದ ಶೋಷಣೆಗೆ ಒಳಗಾಗುತ್ತಿರುವದನ್ನು ನಿರೂಪಿಸಿದ್ದಾರೆ. ಮನಸ್ಸಿನ ನೆಮ್ಮದಿಯ ಸಲುವಾಗಿ ಒಳ್ಳೆಯ ಗ್ರಂಥಗಳನ್ನು ಓದಬಹುದೆಂದು ಸಲಹೆ ನೀಡುತ್ತಾನೆ. ನಭಾ ತನ್ನ ಜೀವನದಲ್ಲಿ ಸಂಭವಿಸಿದ ಘಟನೆಗಳನ್ನು ನೆನಪು ಮಾಡಿಕೊಂಡು ದುಃಖಿಸುವ ಬದಲಿಗೆ ಒಳ್ಳೆಯ ಜ್ಞಾನವನ್ನು ಪಡೆಯಲಿ ಎಂದು ಗ್ರಂಥಗಳನ್ನು ಓದುವಂತೆ ಪ್ರೇರೇಪಿಸುತ್ತಾನೆ. ನಿರಂಜನ ಒಮ್ಮೆ ಊರಿಗೆ ಬಂದು ಹೆತ್ತವರನ್ನು ಕಾಣುವುದಿಲ್ಲ. ಅದಕ್ಕಾಗಿ ಪತ್ರಬರೆದು ಕ್ಷಮೆಯಾಚಿಸುತ್ತಾನೆ. ಇಷ್ಟವಿಲ್ಲದ ವಿಚಾರವಾಗಲಿ, ವ್ಯಕ್ತಿಯಾಗಲಿ ಅಷ್ಟು ಸುಲಭಕ್ಕೆ ಮನಸ್ಸಿನಲ್ಲಿ ಉಳಿಯುವುದಿಲ್ಲ. ತಂದೆಯನ್ನು ಕಾಣಬಾರದೆಂಬ ದೃಢನಿರ್ಧಾರವನ್ನು ಮಾಡಿದ್ದ ಹಾಗಾಗಿ ನಭಾ ನಿರಂಜನನನ್ನು ತಡೆಯಲು ಆಗಲಿಲ್ಲ. ತಾಯ್ತಂದೆಯರನ್ನು ನೆನಪಿಸಿಕೊಳ್ಳುವ ನಿರಂಜನ ಅವರು ಕಣ್ಮುಂದೆ ಇದ್ದಾಗ ನೋಡಿ ಮಾತಾನಾಡಿಸಲು ಹಿಂಜರಿಯುವ ಮನೋಭಾವವನ್ನು ವ್ಯಕ್ತಪಡಿಸುತ್ತಾನೆ.

ನಭೆ ವಿಷಮ ಜ್ವರದಿಂದ ಸಾಯುವ ಸ್ಥಿತಿಯಲ್ಲಿರುವಾಗ ಶರಾವತಿ ಅವಳು ಸತ್ತರೆ ಯಾರಿಗೂ ನಷ್ಟವಾಗುವುದಿಲ್ಲವೆಂಬ ಅಭಿಪ್ರಾಯದಿಂದ ವರ್ತಿಸುತ್ತಾಳೆ. ಹೆಂಡತಿಯ ನಿಯಂತ್ರಣದಲ್ಲಿದ್ದ ಶಂಕರನು ಅಸಹಾಯಕನಾಗುತ್ತಾನೆ. ತಮ್ಮ ಚಿದಾನಂದನಿಗೆ ನಭಾಳ ಸ್ಥಿತಿಯ ಬಗ್ಗೆ ಹೇಳಲು ಶರಾವತಿಯ ಅನುಮತಿ ಕೇಳುತ್ತಾನೆ. ನಿಮ್ಮ ಮಗ ನಿರಂಜನಿಗೆ ಆಗಲಿ, ಚಿದಾನಂದನಿಗೆ ಆಗಲಿ ಈ ವಿಷಯವನ್ನು ತಿಳಿಸಬಾರದು, ತಿಳಿಸಿದರೆ ನನ್ನ ಮೇಲೆ ಆಣೆಯಿದೆ ಎಚ್ಚರ ಎಂದು ಮಾತಾನಾಡುತ್ತಾಳೆ. ನಭಾ ಚಿಕ್ಕಪ್ಪ ಶಂಕರನ ಮನೆಯಲ್ಲಿದ್ದಾಗ ಆದ ಅನುಭವಗಳನ್ನು ಸ್ಮರಿಸಿಕೊಂಡು ಶಂಕರ ಪೇಟೆಯಲ್ಲಿದ್ದರೆ ಎಂತಹ ಕಷ್ಟಬಂದರೂ ಸುಖವಾಗಿರಬಹುದೆಂದು ಯೋಚಿಸುತ್ತಾಳೆ. 'ಅಕ್ಕನ ಬುದ್ಧಿಯನ್ನು ನೋಡಿದೆಯಾ? ಅವಳಿಗೆ ತಿಳಿದ ಯಾವುದನ್ನೂ ಎಷ್ಟೇ ಸಣ್ಣ ವಿಷಯವಾದರೂ ಮರೆಯದೆ ಜ್ಞಾಪಕದಲ್ಲಿಟ್ಟುಕೊಂಡಿರುವಳು'[2] ಎಂದು ಭಗವಾನಂದ ರಮಾನಂದರು ಹೇಳಿಕೊಳ್ಳುತ್ತಾರೆ. ನಭಾ ಹೇಳುವ ನೈತಿಕ ಕತೆಗಳು ಅವರ ಮೇಲೆ ತುಂಬಾ ಪರಿಣಾಮ ಬಿರುವಂತಿದ್ದವು. ನಭಾ ರಾಜಶೇಖರನ ಮನಸ್ಸಿನ ಗೊಂದಲಗಳಿಗೆ ಸ್ಪಷ್ಟವಾಗಿ ಉತ್ತರಿಸಿದಳು. ಅವನ ಮನಃಸ್ಥಿತಿಯು ನಭಾಳ ಮಾತುಗಳನ್ನು ಕೇಳಲು ಸಿದ್ಧವಿರಲಿಲ್ಲ ಆದರೆ ನಭಾ ಅವನೆಳಿದ ಹಾಗೆ ಇರಲು ಸಾಧ್ಯವಿಲ್ಲವೆಂದು ನಿರ್ಧರಿಸಿ ಕೊನೆಗೆ ಒಂದು ಉಪಾಯ ಮಾಡಿ ಯಾರಿಗೂ ತೊಂದರೆಯಾಗದಂತೆ ಮನೆಬಿಟ್ಟು ಹೋದಳು. ರಾಜಶೇಖರ ಅವಳ ನೆನಪಿನಲ್ಲಿ ಹುಚ್ಚನಾದನು.

---

[2] ಅದೇ, ಪುಟ. 82

ಒಟ್ಟಾರೆಯಾಗಿ ನಭಾಳು ಅನುಭವಿಸಿದ ಯಾತನೆಗಳನ್ನು ಮಹಿಳೆಯರು ಒಂದಲ್ಲ ಒಂದು ಕಾರಣದಿಂದಾಗಿ ಅನುಭವಿಸುವರು ಎಂಬ ಅಂಶವನ್ನು ಕಂಡುಕೊಳ್ಳಬಹುದು. ಸ್ತ್ರೀಯರಿಗೆ ತಾಳ್ಮೆ, ಸ್ವಾತಂತ್ರ್ಯ, ಶಿಕ್ಷಣ, ವಿಚಾರಗಳನ್ನು ಅಭಿವ್ಯಕ್ತಪಡಿಸುವ ಅವಕಾಶವಿರಬೇಕು. ಮುಕ್ತವಾಗಿ ಜೀವನ ನಡೆಸಬೇಕೆಂಬ ಅಭಿಲಾಷೆಯಿಂದ ನಿರೂಪಕರು ನಭಾ ಪಾತ್ರದ ಮೂಲಕ ವಿವರಿಸಿದ್ದಾರೆ. ನಭಾಳ ಜೀವನದಲ್ಲಿ ನಡೆದ ಘಟನೆಗಳನ್ನು ನಿರೂಪಿಸುತ್ತಾರೆ. ಕಾದಂಬರಿಕಾರರು ನಭಾಳ ಕುರಿತು ವಿದ್ಯುಲ್ಲತಾ ಕಾದಂಬರಿಯಲ್ಲಿ ಪ್ರಸ್ತಾಪಿಸುತ್ತಾರೆ. ನಭಾಳು ಅನುಭವಿಸಿದ ಯಾತನೆಯನ್ನು ಸ್ತ್ರೀಯರು ಒಂದಲ್ಲ ಒಂದು ಕಾರಣದಿಂದಾಗಿ ಅನುಭವಿಸುವರೆಂಬುದನ್ನು ಕಾದಂಬರಿ ನಿರೂಪಿಸುತ್ತದೆ. ಸ್ತ್ರೀಯರಿಗೆ ಶಿಕ್ಷಣ ಬೇಕು ಎಂಬ ಉದ್ದೇಶದಿಂದ ನಭಾ ಪಾತ್ರದ ಮೂಲಕ ತಮ್ಮ ಮನೋಧೋರಣೆಯನ್ನು ವ್ಯಕ್ತಪಡಿಸುತ್ತಾರೆ.

**ಆಕರ ಗ್ರಂಥ**


- ತಿರುಮಲಾಂಬ. (1920). *ನಭಾ.* ಸತೀಹಿತೈಷಿಣೀ ಮಾತೃಮಂದಿರ.


**ಪರಾಮರ್ಶನ ಗ್ರಂಥಗಳು**


- ಬಸವಣ್ಣ, ಎಂ. *ಸೈಕಲಾಜಿಕಲ್ ಕಾಂಪ್ಲೆಕ್ಸ್‌ಗಳು.* ಅಭಿನವ.
- ಗಿರಿ. *ಗತಿಸ್ಥಿತಿ.* ಅಂಕಿತ ಪುಸ್ತಕ.
- ನಾಗಭೂಷಣಸ್ವಾಮಿ, ಓ.ಎಲ್. (2021). *ಪ್ರಜ್ಞಾಪ್ರವಾಹ ತಂತ್ರ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ನಾಯಕ, ಜಿ.ಎಚ್. *ಕೃತಿಸಾಕ್ಷಿ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ರಂಗನಾಥರಾವ್, ಈ.ಎನ್. *ಕನ್ನಡದ ಮೊದಲ ಕಾದಂಬರಿಗಳು.* ವಸಂತ ಪ್ರಕಾಶನ.
- ಶಶಿಕಲಾ, ಎಚ್. (2021). *ಕನ್ನಡ ಕಾದಂಬರಿ ಲೋಕ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸುಮಿತ್ರಾಬಾಯಿ, ಬಿ.ಎನ್. (2018). *ಸ್ತ್ರೀವಾದ (ಒಂದು ಅವಲೋಕನ).* ಅಹರ್ನಿಶಿ ಪ್ರಕಾಶನ.